Sri B. L. GOWDA.—That question does not arise here.

ಶ್ರೀ ಕೊಂಡಜ್ಜಿ ಬನಪ್ಪ.—ಈ ದೂರುಗಳ ಬಗ್ಗೆ ವಿಚಾರಣೆಯನ್ನು ಮೈಸ್ ಚೇರ್‌ಮೆನರನ್ನು ಇಟ್ಟುಕೊಂಡು ಮಾಡಿದ್ದರೋ ಅಥವಾ ಅವರ ಗೈರುಹಾಜರಿಯಲ್ಲಿ ಮಾಡಿದ್ದರೋ ?

ಶ್ರೀ ಬಿ. ಎಲ್. ಗೌಡ.—ಪೂರ್ಣ ಕಾಲ ಅವರು ಇದ್ದರು ಎಂದು ಹೇಳುವುದಕ್ಕಾಗುವುದಿಲ್ಲ; ಕೆಲವು ಸಮಯ ಅವರು ಇದ್ದರು.

Enhancement of Annual Income Limit for Education Concessions

206. Sri SIDDAIAH KASHIMATH (Shirhatti).—

Will the Minister for Education be pleased to state :—

whether there is any proposal before Government to enhance the annual income of parents who are in Government and semi-Government services from Rs. 2,400 to Rs. 4,800 for purposes of Educational Concessions ?

Sri N. M. KOTRABASIAH SOGI (Deputy Minister for Education).—

No.

ಶ್ರೀ ಸಿದ್ದಯ್ಯ ಕಾಶೀಮಠ್.—ಈಗಲಾದರೂ ಸರ್ಕಾರದವರು ಈ ಆದಾಯದ ಮಿತಿಯನ್ನು 4,800 ರೂಪಾಯಿಗೆ ಏರಿಸುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದರ ಅವಶ್ಯಕತೆ ಏನೂ ಕಾಣುವುದಿಲ್ಲ. ಅದರಿಂದ ಬಡ ಜನರಿಗೆ ಏನೂ ಅನುಕೂಲವಾಗುವುದಿಲ್ಲ. ಶ್ರೀಮಂತರಿಗೆ ಮಾತ್ರ ಅನುಕೂಲವಾಗುತ್ತದೆ. ಆದ್ದರಿಂದ ಅದರ ಅವಶ್ಯಕತೆ ಕಂಡುಬರುವುದಿಲ್ಲ.

Conversion of Dispensary into General Hospital at Channapatna

213. Sri T. V. KRISHNAPPA (Channapatna).—

Will the Minister for Health be pleased to state : —

(*a*) whether there is a proposal before the Government to convert the present dispensary at Channapatna Town into a General Hospital in view of the fact that the population of Channapatna Town is at present more than 50,000 ;

(*b*) if so, whether suitable steps will be taken in the matter ?

Sri G. BASAVANNAPPA (Deputy Minister for Health).—

(*a*) Yes.

(*b*) The matter is under the consideration of Government.

ಶ್ರೀ ಟಿ. ವಿ. ಕೃಷ್ಣಪ್ಪ.—(ಅ)ಗೆ ಉತ್ತರವಾಗಿ ಹೌದು ಎಂದು ಹೇಳಿದೆ. ಹಾಗಾದರೆ ಆ ಔಷಧಾಲಯವನ್ನು ಜನರಲ್ ಆಸ್ಪತ್ರೆಯನ್ನಾಗಿ ಮಾಡುವುದಕ್ಕೆ ಇನ್ನು ಎಷ್ಟು ಕಾಲ ಬೇಕಾಗುತ್ತದೆ ?